ಎನ್ನುವ ಉದ್ಗಾರ ಹೊರಟಿತು. ಅಷ್ಟರಲ್ಲಿ ಆ ಹುಡುಗಿ ಮಕ್ಕಳನ್ನು ಹಿಡಿಯಲು ಮುಂದೆ ಹೋಗಿದ್ದಳು. ಸೀತಾಲಕ್ಷ್ಮಿಯ ಪ್ರತಿಕ್ರಿಯೆಯಿಂದ ತುಸು ಪೆಚ್ಚಾದ ವಿಶಾಲಾಕ್ಷಿ ಪೆಕರು ನಗೆ ಚೆಲ್ಲುತ್ತಾ 'ಹಾಂ ಹೌದು, ಈ ವರ್ಷ ದೀಪಾವಳಿ ಹಬ್ಬಕ್ಕೆ ಬಂದಿದಾರೆ' ಎಂದಳು. ಮತ್ತೆ ಸೀತಾಲಕ್ಷ್ಮಿಯ ತನಿಖೆಗೆ ಅವಕಾಶ ಕೊಡದೇ 'ಬರ್ತೇವೆ, ಕತ್ತಲಾಗಿ ಬಿಡತ್ತೆ, ದೇವಸ್ಥಾನಕ್ಕೆ ಹೋಗಿ ವಾಪಾಸ್ ಮನೆ ಸೇರಿಕೊಳ್ಳಬೇಕು' ಎನ್ನುತ್ತಾ ಅವಸರದಲ್ಲಿ ನಡೆದೇಬಿಟ್ಟಳು.

ಸಂಜೆ ಕಾರ್ತೀಕ ದೀಪಾರಾಧನೆಗೆ ದೇವಸ್ಥಾನಕ್ಕೆ ಹೋದಾಗಲೂ ಸೀತಾಲಕ್ಷ್ಮಿಗೊಂದು ಅಚ್ಚರಿ ಕಾದಿತ್ತು. ಓಡಿಹೋಗಿ ಮದುವೆಯಾಗಿದ್ದ ಸಂಕದ ಮನೆ ಶ್ಯಾಂ ಭಟ್ಟರ ಮಗಳು ಅರ್ಚನಾ ತಾಯಿಯೊಂದಿಗೆ ಬಂದಿದ್ದಳು. ಮತ್ತೊಬ್ಬ ಹುಡುಗ ಗಂಡಸರ ಜೊತೆ ಗುಂಪಿಗೆ ಸೇರದ ಪದದಂತೆ ಹೆಚ್ಚು ಮಾತಾಡದೇ ಸುಮ್ಮನೆ ಕುಳಿತಿದ್ದ. ಎಲ್ಲರನ್ನೂ ಒಮ್ಮೆ ಸ್ಕ್ಯಾನ್ ಮಾಡಿದ ಸೀತಾಲಕ್ಷ್ಮಿಯ ಕಣ್ಣು ಆ ಹುಡುಗನ ಮೇಲೆ ಬಿದ್ದು ಪಕ್ಕದಲ್ಲಿ ಕುಳಿತಿದ್ದ ಪಂಕಜಾಳ ಬಳಿ ವಿಚಾರಿಸಿದಾಗ ಅವಳು 'ಅದೇ ಅರ್ಚನಾ ಮದುವೆಯಾದ ಹುಡುಗ' ಎಂದು ಪಿಸುಗುಟ್ಟಿದ್ದಳು. ಜೀನ್ಸ್ ಪ್ಯಾಂಟು, ಟೀ-ಶರ್ಟು ಹಾಕಿ ಕುಳಿತಿದ್ದ ಆ ಹುಡುಗನನ್ನೂ, ಗರ್ಭಗುಡಿಯ ಕೆಳಗೆ ಮೆಟ್ಟಿಲ ಬಳಿ ಮಡಿಯುಟ್ಟು ಶಲ್ಯ ಹೊದ್ದು ಮಂತ್ರ ಹೇಳುತ್ತಿದ್ದ ಶ್ಯಾಂ ಭಟ್ಟರನ್ನೂ ಗಮನಿಸಿದ ಸೀತಾಲಕ್ಷ್ಮಿಗೆ ಒಂದಕ್ಕೊಂದು ಹೊಂದುವಂತೆ ಕಾಣಿಸಲಿಲ್ಲ. ತಲೆಯೊಳಗೆ ನಾನಾ ಯೋಚನೆಗಳು ಹರಿದಾಡಲಾರಂಭಿಸಿ ಕೊಟ್ಟ ಪ್ರಸಾದದ ಕಡಲೆ ಪಂಚಕಜ್ಜಾಯವೂ ರುಚಿಸದೆ ಮನೆಗೆ ಬಂದಿದ್ದಳು. ರಾತ್ರಿ ಮಲಗಿದಾಲೂ ನಿದ್ರೆ ಹತ್ತದೇ ಒಂದೇ ಸಮನೆ ಯೋಚನೆಗಳ ದಾಳಿ. ಜಾತಿ ಬಿಟ್ಟು ಬೇರೆಯವರನ್ನು ಮದುವೆಯಾದರು ಎಂದು ಯಾರೂ ತಮ್ಮ ತಮ್ಮ ಮಕ್ಕಳನ್ನು ಬಿಟ್ಟುಕೊಟ್ಟಿಲ್ಲ, ರಕ್ತ ಸಂಬಂಧವನ್ನು ತೊರೆದು ತಮ್ಮಂತೆ ಒಳಗೊಳಗೇ ನೋಯುತ್ತಿಲ್ಲ ಎನ್ನುವ ವಾಸ್ತವ ಇರಿಯತೊಡಗಿತು. ಎಲ್ಲರೂ ತಮ್ಮ ತಮ್ಮ ದೊಡ್ಡಸ್ತಿಕೆ ಬಿಗುಮಾನ ಬದಿಗಿಟ್ಟು ಮೆದುವಾಗಿದ್ದಾರೆ; ಹರಿಯುವ ನೀರಿನೊಂದಿಗೆ ಈಜುತ್ತಾ ಕಾಲ ಪ್ರವಾಹಕ್ಕೆ ಪ್ರತಿರೋಧವೊಡ್ಡದೇ ಆಗಿದ್ದಾಯ್ತು ಎಂದು ಮೃದುಧೋರಣೆ ತಳೆದು ಹೊಂದಿಕೊಂಡಿದ್ದಾರೆ ಎನ್ನುವ ಜ್ಞಾನೋದಯ ಸೀತಾಲಕ್ಷ್ಮಿಯ ತಲೆಯಲ್ಲಿ ಮಿಂಚೊಂದನ್ನು ಹೊಳೆಯಿಸಿತು. ಅದುವರೆಗೂ ಭಾರವಾಗಿದ್ದ ತಲೆ ಒಮ್ಮೆಲೇ ಹಗುರಾದಂತಾಗಿ ಏನೋ ನಿರ್ಧಾರಕ್ಕೆ ಬಂದವಳಂತೆ ಆರಾಮಾಗಿ ಮಲಗಿದಳು.



ಬೆಳಕು ಹರಿಯುತ್ತಿದ್ದಂತೆ ಮಗ ವಿಶ್ವನಾಥನಿಗೆ ಫೋನಾಯಿಸಿ 'ನಾನೊಂದು ಮುಖ್ಯ ನಿರ್ಧಾರ ಮಾಡಿದ್ದೇನೆ. ಇನ್ನು ನೀನು ಪಟ್ಟಣದಲ್ಲಿ ಇರುವುದು ಬೇಡ, ಹೆಂಡತಿ ಮಕ್ಕಳೊಂದಿಗೇ ಊರಿಗೇ ಬಾ, ಎಲ್ಲರೂ ಒಟ್ಟಿಗೇ ಇರೋಣ' ಎಂದಳು. ಬೆಳ್ಳಂಬೆಳಗ್ಗೆ ಇಷ್ಟು ವರ್ಷಗಳ ನಂತರ ಅಮ್ಮನ ಈ ಮಾತು ಕೇಳಿದ ವಿಶ್ವನಾಥ ಅವಾಕ್ಕಾದ! 'ಅಲ್ಲ ಅಮ್ಮ...ಅದೂ ಅವತ್ತು ಊರವರು...' ಅಂಥೇನೋ ತೊದಲಿದ. 'ಯಾರಿಗೂ ಹೆದರುವ ಅಗತ್ಯ ಇಲ್ಲ ಮಗನೇ, ನನ್ನ ಮನೆ ನನ್ನ ಸಂಸಾರ, ನನ್ನ ತೀರ್ಮಾನ. ನನ್ನ ಖುಷಿ. ನಿನಗೆ ಯಾವ ಹಿಂಜರಿಕೆಯೂ ಬೇಡ, ಇಷ್ಟು ವರ್ಷ ಬಳಲಿದ್ದು ಸಾಕು, ಇನ್ನು ಎಲ್ಲರೂ ಒಟ್ಟಿಗಿರುವ' ಎಂದಳು. ಅಮ್ಮನ ದನಿಯಲ್ಲಿದ್ದ ದೃಢತೆ ವಿಶ್ವನಾಥನನ್ನು ತಟ್ಟಿತು.

ಮುಂದಿನ ವಾರವೇ ವಿಶ್ವನಾಥ ಪಟ್ಟಣದಲ್ಲಿ ಮನೆ ಖಾಲಿ ಮಾಡಿ ಟೆಂಪೋದಲ್ಲಿ ಹೆಂಡತಿ ಮಕ್ಕಳೊಡನೆ ಊರಿಗೆ ಬಂದ. ಸೀತಾಲಕ್ಷ್ಮಿ ಸಂತೋಷದಿಂದ ಸೊಸೆಯನ್ನು ಮನೆ ತುಂಬಿಸಿಕೊಂಡಳು, ಮೊಮ್ಮಕ್ಕಳನ್ನು ತಬ್ಬಿಕೊಂಡು ಕೊಬ್ಬರಿ ಮಿಠಾಯಿ ಕೊಟ್ಟಳು. ಮನೆಯನ್ನು ತುಂಬಿಕೊಂಡಿದ್ದ ಮೌನವನ್ನು ಮುರಿದ ಮೊಮ್ಮಕ್ಕಳ ಕಲರವವನ್ನು ಮನಸಾರೆ ಅನುಭವಿಸಿದಳು. ಈಗಲೂ ಸೀತಾಲಕ್ಷ್ಮಿ ಸಂಜೆ ಮನೆ ಹೊರಗಿನ ಕಟ್ಟೆಯಲ್ಲಿ ಕೂರುತ್ತಾಳೆ; ಆದರೆ ಒಬ್ಬಳೇ ಅಲ್ಲ, ಜೊತೆಗೆ ಸೊಸೆಯೂ ಇರುತ್ತಾಳೆ, ಮೊಮ್ಮಕ್ಕಳೂ ಅಂಗಳದಲ್ಲಿ ಆಡುತ್ತಿರುತ್ತಾರೆ. ರಸ್ತೆಯಲ್ಲಿ ಹೋಗುವವರು ಬದಲಾದ ಸೀತಾಲಕ್ಷ್ಮಿಯ ಮನೆಯ ಚಿತ್ರಣವನ್ನು ನೋಡುತ್ತಾ ಹೋಗುತ್ತಿರುತ್ತಾರೆ. ●